“ಮಧುರ ಮಕ್ಕಳೇ - ಸ್ವಲ್ಪ ಹುಡುಗಾಟಿಕೆ ಮಾಡಿದರೂ ಸಹ ಮಾಯೆಯು ಈ ರೀತಿ ನುಂಗಿ ಬಿಡುವುದು, ಅವರು ಈಶ್ವರೀಯ ಸಂಗದಿಂದಲೂ ದೂರ ಹೊರಟು ಹೋಗುವರು ಆದ್ದರಿಂದ ತಮ್ಮನ್ನು ಸಂಭಾಲನೆ ಮಾಡಿಕೊಳ್ಳಿರಿ, ಎಚ್ಚರಿಕೆಯಿಂದಿರಿ”

ಪ್ರಶ್ನೆ: ಈ ಈಶ್ವರೀಯ ತರಗತಿಯಲ್ಲಿ ಕುಳಿತುಕೊಳ್ಳಲು ನಿಯಮವು ಏನಾಗಿದೆ?

ಉತ್ತರ: ಯಾರು ತಂದೆಯನ್ನು ಯಥಾರ್ಥವಾಗಿ ಅರಿತುಕೊಂಡಿದ್ದಾರೆಯೋ ಅವರೇ ಈ ತರಗತಿಯಲ್ಲಿ ಕುಳಿತುಕೊಳ್ಳಬೇಕಾಗಿದೆ. ಇಲ್ಲಿ ಕುಳಿತುಕೊಳ್ಳುವವರಲ್ಲಿ ಅವ್ಯಭಿಚಾರಿ ನೆನಪಿರಬೇಕು. ಒಂದುವೇಳೆ ಇಲ್ಲಿ ಕುಳಿತಿದ್ದರೂ ಅನ್ಯರನ್ನು ನೆನಪು ಮಾಡುತ್ತಿದ್ದರೆ ಅವರು ವಾಯುಮಂಡಲವನ್ನು ಹಾಳು ಮಾಡುತ್ತಾರೆ. ಇದೂ ಸಹ ಬಹಳ ದೊಡ್ಡ ಡಿಸ್ಸರ್ವೀಸ್ ಆಗುತ್ತದೆ. ಇಲ್ಲಿನ ಕಾಯಿದೆಯು ಬಹಳ ಕಠಿಣವಾಗಿರುವ ಕಾರಣ ನಿಮ್ಮದು ವೃದ್ಧಿ ಕಡಿಮೆಯಾಗುತ್ತದೆ.

ಪ್ರಶ್ನೆ: ಯಾವ ಒಂದು ಮಾತಿನಿಂದ ಮಕ್ಕಳ ಸ್ಥಿತಿಯ ಬಗ್ಗೆ ಅರ್ಥವಾಗುತ್ತದೆ?

ಉತ್ತರ: ಈ ರೋಗಿ ಭೋಗಿ ಪ್ರಪಂಚದಲ್ಲಿ ಎಂದಾದರೂ ಯಾವುದೇ ಪರೀಕ್ಷೆ ಬಂದಾಗ ಅಳುತ್ತಾರೆಂದರೆ ಆಗ ಅವರ ಸ್ಥಿತಿಯ ಬಗ್ಗೆ ಅರ್ಥವಾಗಿಬಿಡುತ್ತದೆ. ಆದರೆ ಈಗ ನೀವು ಅಳುವಂತಿಲ್ಲ.

ಗೀತೆ: ಮುಖ ನೋಡಿಕೋ ಪ್ರಾಣಿ................

ಓಂ ಶಾಂತಿ. ಪ್ರಾಣಿ ಅಥವಾ ಆತ್ಮವೇ ಎಂದು ಯಾರು ಹೇಳಿದರು? ಇವರು ಪ್ರಾಣವು ಹೊರಟು ಹೋಯಿತೆಂದು ಹೇಳುತ್ತಾರಲ್ಲವೇ! ಅಂದರೆ ಆತ್ಮವು ಹೊರಟು ಹೋಯಿತು ಆದ್ದರಿಂದ ಪ್ರಾಣ ಎಂದು ಆತ್ಮಕ್ಕೆ ಹೇಳುತ್ತಾರೆಯೇ ಹೊರತು ಶರೀರಕ್ಕಲ್ಲ. ತಂದೆಯು ಆತ್ಮರೊಂದಿಗೆ ಕೇಳುತ್ತಾರೆ - ನೀವು ಪಾಪಾತ್ಮರಾಗಿದ್ದೀರೋ ಅಥವಾ ಪುಣ್ಯಾತ್ಮರಾಗಿದ್ದೀರೋ? ಎಲ್ಲರೂ ತಮ್ಮನ್ನು ಪತಿತರೆಂಬುದನ್ನು ಒಪ್ಪಿಕೊಳ್ಳುತ್ತಾರೆ, ಆದ್ದರಿಂದ ತಂದೆ ತಿಳಿಸುತ್ತಾರೆ, ತಮ್ಮೊಂದಿಗೆ ತಾವು ಕೇಳಿಕೊಳ್ಳಿರಿ-ನಾವು ಯಾವ, ಯಾವ ಪಾಪ ಮಾಡಿದ್ದೇವೆ, ಯಾವಾಗ ಮಾಡಿದ್ದೇವೆ? ಪಾಪಾತ್ಮರಂತೂ ಎಲ್ಲರೂ ಆಗಿದ್ದಾರಲ್ಲವೇ? ಆದರೆ ನಂಬರ್ವಾರ್ ಇದ್ದಾರೆ ಅಂದಾಗ ನಂಬರ್ವಾರ್ ಪುಣ್ಯಾತ್ಮ ಯಾರು? ನಂಬರ್ವನ್ ಪಾಪಾತ್ಮ ಯಾರು? ಭಾರತವು ಪಾವನವಾಗಿತ್ತು ಈಗ ಪತಿತವಾಗಿದೆ. ಇಂದು ಎಲ್ಲಾ ಮನುಷ್ಯಾತ್ಮರು ಮಾಯೆಗೆ ಗುಲಾಮರಾಗಿ ಬಿಟ್ಟಿದ್ದಾರೆ. ಅರ್ಧಕಲ್ಪ ಮಾಯೆಯ ಗುಲಾಮರಾಗುತ್ತಾರೆ, ನಂತರ ಮಾಯೆಯನ್ನು ಗುಲಾಮನನ್ನಾಗಿ ಮಾಡಿಕೊಳ್ಳುತ್ತಾರೆ, ಆದ್ದರಿಂದ ಅವರಿಗೆ ಪುಣ್ಯಾತ್ಮರೆಂದು ಹೇಳಲಾಗುತ್ತದೆ. ಲಕ್ಷ್ಮೀ-ನಾರಾಯಣರಿಗೆ ಭಗವಾನ್-ಭಗವತಿ ಎಂದು ಹೇಳಲಾಗುತ್ತದೆ. ಅವರು ಈಗ ಎಲ್ಲಿಗೆ ಹೋದರು? ಸತ್ಯಯುಗದಲ್ಲಿ ಕೇವಲ ಲಕ್ಷ್ಮೀ-ನಾರಾಯಣರು ಇರಲಿಲ್ಲ, ಅವರ ಇಡೀ ರಾಜಧಾನಿಯು ಇತ್ತು. ಆ ಸಮಯದ ಭಾರತಕ್ಕೆ ಪಾವನವೆಂದು ಹೇಳಲಾಗುತ್ತಿತ್ತು. ಅಲ್ಲಿ ದೈವೀಗುಣವಂತ ಮನುಷ್ಯರಿದ್ದರು. ಸರ್ವಗುಣ ಸಂಪನ್ನ, 16 ಕಲಾ ಸಂಪೂರ್ಣ........ ಎಂದು ಹೇಳುತ್ತಾರೆ ಅಂದಮೇಲೆ ಪುಣ್ಯಾತ್ಮರಾದರಲ್ಲವೇ! ಮತ್ತು ಅಹಿಂಸ ಪರಮೋಧರ್ಮಿಗಳೆಂದು ಹೇಳುತ್ತಾರೆ ಅಂದಾಗ ಅವರು ಅಹಿಂಸಕರು ಆದರು. ಹಿಂಸೆಗೆ ಎರಡು ಅರ್ಥಗಳಿವೆ - ಹಿಂಸೆ ಎಂದರೆ ಅನ್ಯರನ್ನು ಹೊಡೆಯುವುದು, ದುಃಖಿ ಮಾಡುವುದು, ಹೊಡೆಯುವುದೂ ಸಹ ಎರಡು ಪ್ರಕಾರವಾಗಿದೆ, ಒಂದು ಕಾಮದ ಕತ್ತಿಯಿಂದ ಹೊಡೆಯುವುದು, ಎರಡನೆಯದು ಕ್ರೋಧದಿಂದ ಹೊಡೆಯುವುದು. ಇದೂ ಸಹ ಹಿಂಸೆಯಾಗಿದೆ. ಈ ಸಮಯದಲ್ಲಿ ಎಲ್ಲರೂ ಪಾಪಾತ್ಮರಾಗಿದ್ದಾರೆ, ನಾನು ನಿರ್ಗುಣನಲ್ಲಿ ಯಾವುದೇ ಗುಣವಿಲ್ಲ ಎಂದು ಹೇಳುತ್ತಾರಲ್ಲವೇ ಅಂದಾಗ ನಂಬರ್ವಾರ್ ಇರುತ್ತಾರೆ ಆದರೆ ಪಾಪಾತ್ಮರಾಗಿದ್ದಾರೆ ಅಂದಮೇಲೆ ಯಾವಾಗ ತಂದೆಯು ಬರುವವರೋ ಆಗ ಅವರನ್ನು ಅರಿತುಕೊಳ್ಳಬೇಕಲ್ಲವೇ? ಪರಮಪಿತ ಎಂದು ಹೇಳುತ್ತಾರೆ, ಅವರಿಗೆ ಯಾರೂ ಪಿತನಿಲ್ಲ, ಅವರೇ ಎಲ್ಲರ ಪಿತನಾಗಿದ್ದಾರೆ, ಎಲ್ಲರ ಶಿಕ್ಷಕನಾಗಿದ್ದಾರೆ. ಪರಮಪಿತನು ಪರಮಧಾಮದಲ್ಲಿ ಇರುತ್ತಾರೆ, ಅವರಿಗೆ ಯಾರೂ ತಂದೆ ಇಲ್ಲ ಮತ್ತೆಲ್ಲರಿಗೂ ತಂದೆ ಇದ್ದಾರೆ. ಬ್ರಹ್ಮಾ-ವಿಷ್ಣು-ಶಂಕರನಿಗೂ ತಂದೆ ಇದ್ದಾರೆ. ಶಿವಾಯ ನಮಃ ಎಂದು ಹೇಳುತ್ತಾರೆ ಅಂದಮೇಲೆ ತಂದೆಯಾದರಲ್ಲವೇ. ಆ ತಂದೆಯು ಪುನರ್ಜನ್ಮದಲ್ಲಿ ಬರುವುದಿಲ್ಲ ಆದರೆ ಅವರು ಕಲ್ಪದಲ್ಲಿ ಒಂದೇ ಬಾರಿ ಜನ್ಮ ಪಡೆಯುತ್ತಾರೆ. ಶಿವಜಯಂತಿ ಎಂದು ಹೇಳುತ್ತಾರೆ ಅಂದಮೇಲೆ ಜನ್ಮವಾಯಿತಲ್ಲವೇ. ಆದರೆ ಶಿವನು ಹೇಗೆ ಜನ್ಮ ಪಡೆಯುತ್ತಾರೆ ಎನ್ನುವುದು ಶಾಸ್ತ್ರವಾದಿಗಳಿಗೂ ಗೊತ್ತಿಲ್ಲ. ಶಿವ ರಾತ್ರಿ ಎಂದು ಹೇಳುತ್ತಾರೆ ಅಂದಾಗ ಅದು ಯಾವ ರಾತ್ರಿ? ರಾತ್ರಿಯಲ್ಲಿ ಮನುಷ್ಯರು ಅಂಧಕಾರದಲ್ಲಿ ಹುಡುಕಾಡುತ್ತಾರೆ ಮತ್ತೆ ಭಕ್ತಿ ಮಾರ್ಗದಲ್ಲಿಯೂ ಗಂಗಾ ಸ್ನಾನ ಮಾಡಿ ನಾಲ್ಕೂ ಧಾಮಗಳ ಯಾತ್ರೆ ಮಾಡಿ ಎಂದು ಹೇಳುತ್ತಾರೆ ಅಂದಮೇಲೆ ಅಲೆದಾಟವಾಯಿತಲ್ಲವೇ. ಇದೇ ರಾತ್ರಿ ಆಯಿತು. ಸತ್ಯ-ತ್ರೇತಾಯುಗವು ದಿನವಾಗಿದೆ. ಸತ್ಯ-ತ್ರೇತಾಯುಗದಲ್ಲಿ ಸುಖವಿರುತ್ತದೆ. ಅಲ್ಲಿ ಪರಮಾತ್ಮನನ್ನು ನೆನಪು ಮಾಡುವ ಅವಶ್ಯಕತೆ ಇರುವುದಿಲ್ಲ. ದುಃಖದಲ್ಲಿ ಎಲ್ಲರೂ ಸ್ಮರಣೆ ಮಾಡುವರೆಂದು ಹೇಳುತ್ತಾರೆ, ಭಕ್ತರೂ ಸ್ಮರಣೆ ಮಾಡುತ್ತಾರೆ, ಸಾಧನೆ ಮಾಡುತ್ತಾರೆ ಅಂದಮೇಲೆ ಪತಿತರಾದರಲ್ಲವೇ. ಭಾರತಕ್ಕೆ ಪತಿತವೆಂದು ಹೇಳುತ್ತಾರೆ ಏಕೆಂದರೆ ಭಾರತವೇ ಪಾವನವಾಗಿತ್ತು ಆಗ ದೇವೀ-ದೇವತಾ ಧರ್ಮವಿತ್ತು, ಪವಿತ್ರರು ಇದ್ದರು.

ಸತ್ಯ-ತ್ರೇತಾಯುಗದಲ್ಲಿ ಅನ್ಯ ಧರ್ಮವಿಲ್ಲ. ಅನ್ಯ ಧರ್ಮದ ಪತಿತ ಆತ್ಮರೆಲ್ಲರೂ ಶಿಕ್ಷೆಗಳನ್ನು ಅನುಭವಿಸಿ ಪರಮಧಾಮದಲ್ಲಿ ಇರುತ್ತಾರೆ. ಸತ್ಯಯುಗದಲ್ಲಿ ಬರುವುದಿಲ್ಲ. ಸತ್ಯಯುಗದಲ್ಲಿ ಸುಖ-ಶಾಂತಿ, ಸಂಪತ್ತು ಎಲ್ಲವೂ ಇತ್ತು. ಅಲ್ಲಿ ಇರುವುದೇ ಪ್ರಾಲಬ್ಧ.

ಇಲ್ಲಿ ನೀವು ಮಕ್ಕಳದು ಈಗ ಏಕಮತವಿದೆ. ಲೌಕಿಕದಲ್ಲಿ ಒಂದು ಮನೆಯಲ್ಲಿ ಅನೇಕ ಮತಗಳು ಇರುತ್ತವೆ. ತಂದೆಯು ಗಣೇಶನನ್ನು ನೆನಪು ಮಾಡಿದರೆ ಮಗನು ಹನುಮಂತನನ್ನು ನೆನಪು ಮಾಡುವವರು ಅಂದಾಗ ಅನೇಕ ಮತಗಳಾಯಿತಲ್ಲವೇ. ಇಲ್ಲಿ ತಂದೆಯಿಂದ ಮಕ್ಕಳಿಗೆ ಆಸ್ತಿ ಸಿಗುತ್ತದೆ. ಹಾಗೆ ನೋಡಿದರೆ ಅನೇಕರನ್ನು ಬಾಬಾ ಎಂದು ಹೇಳಿಬಿಡುತ್ತಾರೆ. ಗಾಂಧಿಜಿಯೂ ಸಹ ಬಾಪು ಆಗಿದ್ದರು ಆದರೆ ಅವರು ಎಲ್ಲರ ತಂದೆ ಆಗಿರಲಿಲ್ಲ. ಇವರಂತೂ ಬೇಹದ್ದಿನ ತಂದೆಯಾಗಿದ್ದಾರೆ. ತಂದೆಯೇ ಬಂದು ಎಲ್ಲಾ ಸಂಕೋಲೆಗಳಿಂದ ಬಿಡಿಸುತ್ತಾರೆ. ಭಕ್ತಿಯದ್ದೂ ಸಹ ಸಂಕೋಲೆಯಾಗಿದೆ. ನಾವು ಪತಿತರಾಗಿದ್ದೇವೆ ಎಂಬುದನ್ನು ಮನುಷ್ಯರು ಅರ್ಥ ಮಾಡಿಕೊಳ್ಳುವುದೇ ಇಲ್ಲ. ಪತಿತರನ್ನು ಪಾವನರನ್ನಾಗಿ ಮಾಡುವವರು ಒಬ್ಬ ತಂದೆಯಾಗಿದ್ದಾರೆ. ನೀವು ಒಬ್ಬ ಸತ್ಯ ತಂದೆಯನ್ನು ಒಪ್ಪುತ್ತೀರಿ. ಅನ್ಯ ಸತ್ಸಂಗಗಳಲ್ಲಿ ಹೋದರೆ ಅದನ್ನು ಯಾರೂ ನಿರಾಕರಿಸುವುದಿಲ್ಲ. ಇಲ್ಲಿಗೆ ಬರಲು ಎಲ್ಲರೂ ನಿರಾಕರಿಸುತ್ತಾರೆ. ಎಲ್ಲಿಯವರೆಗೆ ತಂದೆಯನ್ನು ಅರಿತುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ತರಗತಿಯಲ್ಲಿ ಕುಳಿತುಕೊಳ್ಳಲು ಸಾಧ್ಯವಿಲ್ಲ ಏಕೆಂದರೆ ಎಲ್ಲಿಯವರೆಗೆ ನೆನಪು ಮಾಡುವುದಿಲ್ಲವೋ ಅಲ್ಲಿಯವರೆಗೆ ಯೋಗ್ಯರಲ್ಲ. ಮಾಯೆಯು ಅಯೋಗ್ಯರನ್ನಾಗಿ ಮಾಡುತ್ತದೆ. ನಾನು ನಿರ್ಗುಣನಲ್ಲಿ ಯಾವುದೇ ಗುಣವಿಲ್ಲ ಎಂದು ಹೇಳುತ್ತಾರೆ. ಇದನ್ನು ಎಲ್ಲರೂ ಹಾಡುತ್ತಾರೆ ಅಂದರೆ ಎಲ್ಲರೂ ಪತಿತರಾಗಿದ್ದಾರೆ. ಬ್ರಹ್ಮಾ-ವಿಷ್ಣು-ಶಂಕರನನ್ನು ನಿಂದಿಸುತ್ತಾರೆ. ಅವರದು ಎಂತಹ ದೃಷ್ಟಿಯೋ ಸೃಷ್ಟಿಯೂ ಹಾಗೆಯೇ ಕಾಣುತ್ತದೆ. ಒಂದುವೇಳೆ ಯಾರಾದರೂ ಇಲ್ಲಿ ಕುಳಿತುಕೊಂಡು ಅನ್ಯರನ್ನು ನೆನಪು ಮಾಡುತ್ತಿದ್ದರೆ ಅದೂ ಸಹ ವ್ಯಭಿಚಾರಿ ನೆನಪಾಯಿತಲ್ಲವೇ. ಭಲೆ ನೆನಪು ಪೂರ್ಣ ರೀತಿಯಲ್ಲಿ ಸ್ಥಿರವಾಗಿ ಇರುವುದಿಲ್ಲ ಏಕೆಂದರೆ ಮಾಯೆಯು ಬುದ್ಧಿಯೋಗವನ್ನು ತುಂಡರಿಸುತ್ತದೆ ಆದರೂ ತಂದೆಯು ನಿಮಗೆ ಬುದ್ಧಿಯೋಗ ಜೋಡಿಸುವುದನ್ನು ಕಲಿಸುತ್ತಾರೆ. ಅಂತ್ಯದಲ್ಲಿ ನಿಮ್ಮ ನೆನಪು ಸ್ಥಿರವಾಗಿ ಇರುವುದು. ಅತೀಂದ್ರಿಯ ಸುಖದ ಗಾಯನವು ಗೋಪ-ಗೋಪಿಕೆಯರಿಂದ ಕೇಳಿ ಎಂದು ಅಂತಿಮ ಸಮಯಕ್ಕಾಗಿಯೇ ಗಾಯನವಿದೆ. ಇಲ್ಲಿ ಬಹಳ ಕಠಿಣ ನಿಯಮಗಳಿರುವ ಕಾರಣ ಈ ಸಂಸ್ಥೆಯು ವೃದ್ಧಿ ಆಗುತ್ತಿಲ್ಲ. ಎಲ್ಲಿಯವರೆಗೆ ತಂದೆಯನ್ನು ಅರಿತುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ತರಗತಿಯಲ್ಲಿ ಕುಳಿತುಕೊಳ್ಳುವಂತಿಲ್ಲ ಏಕೆಂದರೆ ಇಲ್ಲಿ ಅವ್ಯಭಿಚಾರಿ ನೆನಪು ಬೇಕಾಗಿದೆ. ಯಾರೂ ಸಹ ಸತ್ಯ ಖಂಡದ ಮಾಲೀಕರನ್ನಾಗಿ ಮಾಡಲು ಸಾಧ್ಯವಿಲ್ಲ. ನೀವು ತಂದೆಯ ಮೂಲಕ ಸತ್ಯ ಖಂಡದ ಮಾಲೀಕರಾಗುತ್ತೀರಿ. ಈಗಂತೂ ಅಸತ್ಯ ಖಂಡವಾಗಿದೆ, ಆದ್ದರಿಂದ ಸುಳ್ಳು ಮಾಯೆ, ಸುಳ್ಳು ಶರೀರವೆಂದು ಹೇಳುತ್ತಾರಲ್ಲವೇ. ಅರ್ಧಕಲ್ಪ ಹೀಗೆಯೇ ನಡೆಯುತ್ತದೆ. ತಿಳಿದುಕೊಳ್ಳಿ, ತಂದೆಯು ಜ್ಞಾನಕ್ಕೆ ಬಂದರೆ ಅವರ ರಚನೆಯನ್ನು ಪಾವನರನ್ನಾಗಿ ಮಾಡಬೇಕಾಗುತ್ತದೆ. ಒಂದುವೇಳೆ ಮಕ್ಕಳು ಪವಿತ್ರರಾಗದಿದ್ದರೆ ಅವರು ಕುಪುತ್ರರಾದರು. ಮನೆಯಲ್ಲಿ ಒಂದುವೇಳೆ ಒಬ್ಬರು ಪವಿತ್ರರಾಗಿ ಮತ್ತೊಬ್ಬರು ಆಗದಿದ್ದರೆ ಅಲ್ಲಿ ಜಗಳವಾಗಿಬಿಡುತ್ತದೆ. ಆದ್ದರಿಂದ ಮನುಷ್ಯರ ಹೃದಯವು ವಿದೀರ್ಣವಾಗುತ್ತದೆ. ಇಲ್ಲಿ ಕೇಳುವಾಗ ಚೆನ್ನಾಗಿದೆ-ಚೆನ್ನಾಗಿದೆ ಎಂದು ಹೇಳುತ್ತಾರೆ ಆದರೆ ಹೊರಗಡೆ ಹೋದಮೇಲೆ ಮೊದಲಿನಂತೆಯೇ ಆಗಿಬಿಡುತ್ತಾರೆ. ಅವರು ಈ ರೀತಿ ತಿಳಿದುಕೊಳ್ಳುತ್ತಾರೆ, ಗೃಹಸ್ಥ ವ್ಯವಹಾರದಲ್ಲಿ ಇರುತ್ತಾ ಪವಿತ್ರವಾಗಿರಲು ಸಾಧ್ಯವಿಲ್ಲ ಎಂದು ಸನ್ಯಾಸಿಗಳು ಹೇಳುತ್ತಾರೆ ಅಂದಮೇಲೆ ನಾವು ಹೇಗೆ ಪವಿತ್ರವಾಗಿರಲು ಸಾಧ್ಯ. ಆದರೆ ಇಲ್ಲಂತೂ ಪ್ರತಿಜ್ಞೆ ಮಾಡಬೇಕಾಗುತ್ತದೆ. ಮಕ್ಕಳು ಹೇಳುತ್ತಾರೆ - ಬಾಬಾ ನಾವು ಪವಿತ್ರರಾಗುತ್ತೇವೆ ಅರ್ಧ ಕಲ್ಪ ಸದ್ಗತಿ ದಾತನೇ ಬನ್ನಿ ಎಂದು ತಮ್ಮನ್ನು ಕರೆದೆವು, ಆದ್ದರಿಂದ ಈಗ ತಂದೆಯು ಬಂದಿದ್ದಾರೆ ಅಂದಮೇಲೆ ಈಗ ಅವರ ಮಾತನ್ನು ಪಾಲಿಸದೇ ಮತ್ತ್ಯಾರ ಮಾತನ್ನು ಕೇಳುವಿರಿ? ತಂದೆಯು ತಿಳಿಸುತ್ತಾರೆ ಮಕ್ಕಳೇ- ಒಂದುವೇಳೆ ನನ್ನ ಆಜ್ಞೆಯನ್ನು ಪಾಲನೆ ಮಾಡದಿದ್ದರೆ ಸತ್ಯಯುಗದಲ್ಲಿ ಹೇಗೆ ಬರುವಿರಿ! ಒಂದುವೇಳೆ ತಂದೆಯ ಸರಿಯಾದ ಮಗು ಆಗದಿದ್ದರೆ ಅವರು ಕುಪುತ್ರರಾದರು. ಅವರು ಸ್ಥಿರವಾಗಿ ನಿಲ್ಲಲು ಸಾಧ್ಯವಿಲ್ಲ. ಹಂಸ ಮತ್ತು ಕೊಕ್ಕರೆಯು ಒಟ್ಟಿಗೆ ಇರಲು ಹೇಗೆ ಸಾಧ್ಯ? ಕೆಲವರು ಸ್ತ್ರೀಯರು ಪವಿತ್ರವಾಗಿರುತ್ತಾರೆ ಪತಿಯು ಪವಿತ್ರವಾಗದಿದ್ದರೆ ಸ್ತ್ರೀ ತಂದೆಯನ್ನು ಬಹಳ ಕರೆಯುತ್ತಾರೆ. ತಂದೆಯು ತಿಳಿಸುತ್ತಾರೆ - ಮಕ್ಕಳೇ ನೀವು ಎಲ್ಲವನ್ನು ಸಹನೆ ಮಾಡಬೇಕಾಗುವುದು ಹೋಗಿ ಯಾವುದಾದರೂ ನೌಕರಿ ಮಾಡಿ, ಪಾತ್ರೆ ತೊಳೆಯಿರಿ, ಹೊಟ್ಟೆಗೆ ರೊಟ್ಟಿಯಷ್ಟೇ ಬೇಕಲ್ಲವೇ. ವಿಕಾರದಲ್ಲಿ ಹೋಗುವುದಕ್ಕಿಂತ ಪಾತ್ರೆ ತೊಳೆಯುವುದು ಒಳ್ಳೆಯದಲ್ಲವೇ! ಮಗಳನ್ನು ಲೌಕಿಕ ತಂದೆಯು ವಿಕಾರದಿಂದ ತಪ್ಪಿಸುವುದಿಲ್ಲ ಏಕೆಂದರೆ ತಾವೇ ತಮ್ಮ ಮಗಳಿಗೆ ವಿಕಾರದಲ್ಲಿ ಹೋಗಲು ವಿವಾಹ ಮಾಡುತ್ತಾರೆ ಆದರೆ ಪಾರಲೌಕಿಕ ತಂದೆ ಹೇಳುತ್ತಾರೆ ಮಕ್ಕಳೇ 5 ವಿಕಾರಗಳ ದಾನ ಮಾಡಿರಿ. ಆಗ ಗ್ರಹಣವು ಬಿಟ್ಟು ಹೋಗುವುದು. ಚಂದ್ರಮನಂತೆ 16 ಕಲಾ ಸಂಪೂರ್ಣರಾಗಿಬಿಡುತ್ತೀರಿ. ಶ್ರೀ ಕೃಷ್ಣನು 16 ಕಲಾ ಸಂಪೂರ್ಣನಲ್ಲವೇ. ಈಗಂತೂ ಕಲಾಹೀನವಾಗಿದ್ದಾರೆ. ಎಲ್ಲರೂ ಪತಿತರಾಗಿದ್ದಾರೆ. ನಾವು ಪತಿತರೆಂದು ಸ್ವಯಂ ಹೇಳುತ್ತಾರೆ ಆದರೆ ನೀವು ನರಕವಾಸಿಗಳಾಗಿದ್ದೀರಿ ಎಂದು ಹೇಳಿದ್ದೇ ಆದರೆ ಮುನಿಸಿಕೊಳ್ಳುತ್ತಾರೆ. ಈ ಸಮಯದಲ್ಲಿ ಯಥಾ ರಾಜಾ-ರಾಣಿ ತಥಾ ಪ್ರಜೆ ಎಲ್ಲರೂ ಪತಿತರಾಗಿದ್ದಾರೆ. ಸತ್ಯಯುಗವು ಶ್ರೇಷ್ಠಾಚಾರಿ ಪ್ರಪಂಚವಾಗಿದೆ. ಸತ್ಯಯುಗದಲ್ಲಿ ಯಾರೂ ಅಳುವುದಿಲ್ಲ. ಅಂದಮೇಲೆ ನೀವೂ ಸಹ ಇಲ್ಲಿ ಅಳುವ ಕಾಯಿದೆ ಇಲ್ಲ. ಅಳುತ್ತೀರೆಂದರೆ ಅರ್ಧ ಸ್ಥಿತಿಯ ಕೊರತೆ ಇದೆ. ತಂದೆಯು 21 ಜನ್ಮಗಳ ರಾಜ್ಯಭಾಗ್ಯವನ್ನು ಕೊಡುತ್ತಾರೆಂದರೆ ಅಳುವ ಅವಶ್ಯಕತೆ ಏನಿದೆ ಆದರೆ ಇದನ್ನು ಮರೆತು ಹೋಗುತ್ತೀರಿ. ಇದು ರೋಗಿ ಪ್ರಪಂಚ, ಭೋಗಿ ಪ್ರಪಂಚವಾಗಿದೆ, ಸತ್ಯಯುಗವು ನಿರೋಗಿ, ಯೋಗಿ ಪ್ರಪಂಚವಾಗಿದೆ. ಇಲ್ಲಂತೂ ತಂದೆಯನ್ನು ನೆನಪು ಮಾಡಬೇಕಾಗಿದೆ. ನೆನಪು ಮಾಡದಿದ್ದರೆ ಡಿಸ್ಸರ್ವೀಸ್ ಮಾಡುತ್ತೀರಿ ಎಂದರ್ಥ ಏಕೆಂದರೆ ವಾಯುಮಂಡಲವನ್ನು ಕೆಡಿಸುತ್ತೀರಿ. ಇಲ್ಲಂತೂ ಎಲ್ಲರೂ

ಪತಿತರಾಗಿದ್ದಾರೆ. ಪತಿತರಿಗೆ ದಾನ ಮಾಡುವುದರಿಂದ ಪಾವನರಾಗಲು ಸಾಧ್ಯವಿಲ್ಲ. ಪತಿತರಿಗೆ ದಾನ ಮಾಡಿದರೆ ಅವರು ಪತಿತ ಕರ್ಮವನ್ನೇ ಮಾಡುತ್ತಾರೆ, ಇಲ್ಲಂತೂ ಪತಿತರ ಜೊತೆ ಪತಿತರ ವ್ಯವಹಾರವಿದೆ. ಸತ್ಯಯುಗದಲ್ಲಿ ಪಾವನರೊಂದಿಗೆ ಪಾವನರ ವ್ಯವಹಾರ ಇರುವುದು. ವ್ಯಭಿಚಾರಿ ಪದವೂ ಕೆಟ್ಟದ್ದಾಗಿದೆಯಲ್ಲವೇ. ಮೊದಲು ಭಕ್ತಿಯೂ ಅವ್ಯಭಿಚಾರಿ ಆಗಿತ್ತು. ಶಿವನ ಪೂಜೆಯನ್ನೇ ಮಾಡುತ್ತಿದ್ದರು. ನಂತರ ದೇವತೆಗಳು ಭಕ್ತಿಯನ್ನು ಆರಂಭಿಸಿದರು. ಕೊನೆಯಲ್ಲಿ ರಜೋಗುಣಿ ಭಕ್ತಿ ಎಂದು ಹೇಳಲಾಗುತ್ತದೆ. ಈಗಂತೂ ಮನುಷ್ಯರಿಗೂ ಪೂಜೆ ಮಾಡಲು ತೊಡಗಿದ್ದಾರೆ. ಸನ್ಯಾಸಿಗಳ ಚರಣಗಳನ್ನು ತೊಳೆದು ಕುಡಿಯುತ್ತಾರೆ. ಮನುಷ್ಯರ ಪೂಜೆಗೆ ಭೂತ ಪೂಜೆ ಎಂದು ಕರೆಯಲಾಗುತ್ತದೆ. ಅರ್ಥಾತ್ ಪಂಚತತ್ವಗಳಿಂದ ಆಗಿರುವ ಶರೀರದ ಪೂಜೆಯಾಗಿದೆ. ಇವರು ಏನನ್ನೂ ತಿಳಿದುಕೊಂಡಿಲ್ಲ ಆದ್ದರಿಂದ ಅಂಧರ ಮಕ್ಕಳು ಅಂಧರೆಂದು ಹೇಳಲಾಗುತ್ತದೆ. ನೀವು ತಂದೆಯ ಮಕ್ಕಳು ಕಣ್ಣು ಇರುವವರಾಗಿದ್ದೀರಿ. ಅವರಂತೂ ಅಂಧಕಾರದಲ್ಲಿ ಅಲೆದಾಡುತ್ತಾ ಇರುತ್ತಾರೆ. ಗುರುಬ್ರಹ್ಮ-ಗುರುವಿಷ್ಣು-ಗುರುಶಂಕರನೆಂದು ಹೇಳುತ್ತಾರೆ. ಈ ರೀತಿ ಹೇಳುವುದೂ ಸಹ ತಪ್ಪಾಗಿದೆ. ವಿಷ್ಣುವು ಸತ್ಯಯುಗದಲ್ಲಿ ಇರುತ್ತಾನೆ. ತನ್ನ ಪ್ರಾಲಬ್ಧವನ್ನು ಭೋಗಿಸುತ್ತಾನೆ. ಬಾಕಿ ಬ್ರಹ್ಮನೂ ಗುರುವಾಗಿದ್ದಾರೆ. ಅದೂ ಸಹ ಶಿವತಂದೆಯೇ ಈ ತನುವಿನಲ್ಲಿ ಬಂದಾಗ ಮಾತ್ರ. ಎಲ್ಲಿಯವರೆಗೆ ತಂದೆಯು ಬರುವುದಿಲ್ಲವೋ ಅಲ್ಲಿಯವರೆಗೆ ಇವರೂ ಸಹ ಅಷ್ಟು ಯೋಗ್ಯವಾಗಿರಲಿಲ್ಲ.

ಬೇಹದ್ದಿನ ತಂದೆಯು ಹೇಳುತ್ತಾರೆ - ಯಾರು ನನ್ನ ಶ್ರೀಮತದ ಮೇಲೆ ನಡೆಯುವರೋ ಅವರೇ ನನ್ನ ಸುಪುತ್ರ ಮಕ್ಕಳಾಗಿದ್ದಾರೆ. ಹೇಗೆ ಸರ್ಕಾರವು ಆದೇಶ ಹೊರಡಿಸುತ್ತದೆ, ಹಾಗೆಯೇ ಈ ಪಾಂಡವ ಸರ್ಕಾರವೂ ಸಹ ಆದೇಶ ಹೊರಡಿಸುತ್ತದೆ-ಪವಿತ್ರರಾದರೆ ಪವಿತ್ರ ಪ್ರಪಂಚದ ಮಾಲೀಕರಾಗುತ್ತೀರಿ ಆದ್ದರಿಂದ ತಂದೆಯು ತಿಳಿಸುತ್ತಾರೆ ಮಕ್ಕಳೇ ದೇಹ ಸಹಿತವಾಗಿ ದೇಹದ ಎಲ್ಲಾ ಸಂಬಂಧಗಳನ್ನು ಮರೆತು ನನ್ನೊಬ್ಬನನ್ನೇ ನೆನಪು ಮಾಡಿ. ತಂದೆಯು ಶರೀರದಿಂದ ಬುದ್ಧಿಯೋಗವನ್ನು ತೆಗೆಸುತ್ತಾರೆ ಮತ್ತು ಪರಮಾತ್ಮನೊಂದಿಗೆ ಆತ್ಮನ ನಿಶ್ಚಿತಾರ್ಥ ಮಾಡಿಸುತ್ತಾರೆ ಆದ್ದರಿಂದ ತಂದೆಯನ್ನು ನೆನಪು ಮಾಡಬೇಕು ಮತ್ತು ಶರೀರದಿಂದಲೂ ಮಮತ್ವವನ್ನು ತೆಗೆಯಬೇಕಾಗಿದೆ. ಮೋಹಾಜೀತ ರಾಜನ ಕಥೆ ಇದೆಯಲ್ಲವೇ. ಈಗ ನೀವೂ ಸಹ ಮೋಹಜೀತರಾಗಬೇಕಾಗಿದೆ. ಇದು ಯುದ್ಧದ ಮೈದಾನವಾಗಿದೆ. ಈ ಯುದ್ಧದಲ್ಲಿ ಸ್ವಲ್ಪ ಹುಡುಗಾಟಿಕೆ ಮಾಡಿದರೂ ಮಾಯೆ ನುಂಗಿಬಿಡುತ್ತದೆ. ಆನೆಯನ್ನು ಮೊಸಳೆ ನುಂಗಿತು ಎಂದು ಹೇಳುತ್ತಾರೆ ಆದರೆ ಆನೆಯು ನೀರಿನಲ್ಲಿ ಹೋಯಿತು, ಮೊಸಳೆಯು ಅದನ್ನು ಹಿಡಿದುಕೊಂಡಿತು ಎಂದಲ್ಲ. ಇದು ಇಲ್ಲಿನ ಮಾತಾಗಿದೆ. ಒಳ್ಳೊಳ್ಳೆಯ ಮಹಾರಥಿಗಳಿದ್ದಾರೆ ಅನೇಕರಿಗೆ ತಿಳಿಸಿಕೊಡುತ್ತಾರೆ, ಸೇವಾಕೇಂದ್ರಗಳನ್ನೂ ಸಂಭಾಲನೆ ಮಾಡುತ್ತಾರೆ. ಒಂದುವೇಳೆ ಅವರೂ ಸಹ ಸ್ವಲ್ಪ ಹುಡುಗಾಟಿಕೆ ಮಾಡಿದರೂ ಮಾಯೆ ನುಂಗಿಬಿಡುತ್ತದೆ. ಈ ರೀತಿ ನುಂಗುತ್ತದೆ ಅವರನ್ನು ತಂದೆಯ ಸಂಗದಿಂದ ದೂರ ಎಳೆದುಕೊಂಡು ಹೋಗುತ್ತದೆ. ಹಳೆಯ ಪ್ರಪಂಚಕ್ಕೆ ಹೊರಟು ಹೋಗುತ್ತಾರೆ. ಆದ್ದರಿಂದ ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ ಏಕೆಂದರೆ ಮಾಯೆಯೊಂದಿಗೆ ಬಾಕ್ಸಿಂಗ್ ಆಗಿದೆ ಮತ್ತು ಇವು ಬಹಳ ತಿಳಿದುಕೊಳ್ಳುವ ಮಾತುಗಳಾಗಿವೆ. ಕೇವಲ ಸತ್ಯ-ಸತ್ಯ ಎನ್ನುವುದರ ಮಾತಲ್ಲ. ಭಕ್ತಿ ಮಾರ್ಗದಲ್ಲಿಯೂ ಸಹ ಸತ್ಯ-ಸತ್ಯ ಎಂದು ಒಪ್ಪಿಕೊಳ್ಳುತ್ತಾ ಹೋಗುತ್ತಾರೆ. ಇಂತಹವರು ಮೂಗಿನಿಂದ ಹುಟ್ಟಿದರು, ಹನುಮಂತನು ವಾಯುವಿನಿಂದ ಹುಟ್ಟಿದನು ಎಂದು ಹೇಳಿದರೂ ಸಹ ಸತ್ಯವೆಂದು ನಂಬುತ್ತಾರೆ, ಅದೆಲ್ಲವೂ ಭಕ್ತಿಮಾರ್ಗದ ಮಾತುಗಳಾಗಿವೆ. ಇಲ್ಲಿ ಜ್ಞಾನದ ಮಾತುಗಳಾಗಿವೆ ಯಾವುದನ್ನು ಧಾರಣೆ ಮಾಡಿಕೊಳ್ಳಬೇಕಾಗಿದೆ. ಮಾಯೆಯೊಂದಿಗೆ ಯುದ್ಧ ಮಾಡಬೇಕಾಗಿದೆ. ಒಂದುವೇಳೆ ತಂದೆಯ ಮಕ್ಕಳಾಗಿಯೂ ಯಾವುದೇ ಪಾಪ ಕರ್ಮವನ್ನು ಮಾಡಿದರೆ ಇನ್ನೂ ನೂರು ಪಟ್ಟು ಶಿಕ್ಷೆ ಸಿಗುವುದು, ಆದ್ದರಿಂದ ತಂದೆ ಬಹಳ ಎಚ್ಚರಿಕೆ ನೀಡುತ್ತಾರೆ. ನೋಡಿರಿ ಈಗಂತೂ ಬಾಪ್ದಾದಾ ಸಮ್ಮುಖದಲ್ಲಿ ಕುಳಿತು ಓದಿಸುತ್ತಿದ್ದಾರೆ ಅಂದಮೇಲೆ ಹೇ! ಭಗವಂತ ಎಂದು ಈಗ ಹೇಳುವಂತಿಲ್ಲ. ಶಿವತಂದೆಯ ಮಗ ಒಬ್ಬ ಬ್ರಹ್ಮನಾಗಿದ್ದಾರೆ ನಂತರ ಬ್ರಹ್ಮನೇ ವಿಷ್ಣುವಾಗುತ್ತಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತ ಪಿತ ಬಾಪ್ದಾದಾರವರ ನೆನಪು ಪ್ರೀತಿ ಮತ್ತು ಗುಡ್ ಮಾರ್ನಿಂಗ್. ಆತ್ಮಿಕ ತ0ದೆಯ ಆತ್ಮಿಕ ಮಕ್ಕಳಿಗೆ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಚಂದ್ರಮನಂತೆ 16 ಕಲಾ ಸಂಪೂರ್ಣರಾಗುವುದಕ್ಕಾಗಿ 5 ವಿಕಾರಗಳ ದಾನ ಮಾಡಿ ಗ್ರಹಣದಿಂದ ಮುಕ್ತರಾಗಬೇಕಾಗಿದೆ.

2. ತಂದೆಯ ಮಕ್ಕಳಾಗಿ ಯಾವುದೇ ಪಾಪ ಕರ್ಮ ಮಾಡಬಾರದು. ಶರೀರದಿಂದಲೂ ಮಮತೆಯನ್ನು ತೆಗೆದು ಮೋಹಜೀತರಾಗಬೇಕಾಗಿದೆ.

ವರದಾನ: ತಮ್ಮ ಶ್ರೇಷ್ಠ ದೃಷ್ಟಿ,ವೃತ್ತಿಯ ಮುಖಾಂತರ ಸೃಷ್ಠಿಯ ಪರಿವರ್ತನೆ ಮಾಡುವಂತಹ ವಿಶ್ವದ ಆಧಾರಮೂರ್ತಿ ಭವ

ನೀವು ಮಕ್ಕಳು ವಿಶ್ವದ ಸರ್ವ ಆತ್ಮಗಳಿಗೆ ಆಧಾರಮೂರ್ತಿಗಳಾಗಿರುವಿರಿ. ತಮ್ಮ ಶ್ರೇಷ್ಠ ವೃತ್ತಿಯಿಂದ ವಿಶ್ವದ ವಾತಾವರಣ ಪರಿವರ್ತನೆಯಾಗುತ್ತಿರುವುದು, ನಿಮ್ಮ ಪವಿತ್ರ ದೃಷ್ಠಿಯಿಂದ ವಿಶ್ವದ ಆತ್ಮಗಳು ಮತ್ತು ಪ್ರಕೃತಿ ಎರಡೂ ಪವಿತ್ರವಾಗುತ್ತಿವೆ. ನಿಮ್ಮ ದೃಷ್ಠಿಯಿಂದ ಸೃಷ್ಠಿ ಬದಲಾವಣೆಯಾಗುತ್ತಿದೆ. ನಿಮ್ಮ ಶ್ರೇಷ್ಠ ಕರ್ಮದಿಂದ

ಶ್ರೇಷ್ಠಾಚಾರಿ ಪ್ರಪಂಚ ಆಗುತ್ತಿದೆ, ಈ ರೀತಿ ಜವಾಬ್ದಾರಿಯ ಕಿರೀಟ ಧರಿಸುವಂತಹ ನೀವು ಮಕ್ಕಳೇ ಭವಿಷ್ಯದ ಕಿರೀಟಧಾರಿಗಳಾಗುವಿರಿ.

ಸ್ಲೋಗನ್: ಭಿನ್ನ ಮತ್ತು ಅಧಿಕಾರಿಗಳಾಗಿ ಕರ್ಮಮಾಡಿ ಆಗ ಯಾವುದೇ ಬಂಧನವೂ ಸಹ ತನ್ನ ಬಂಧನದಲ್ಲಿ ಬಂಧಿಸುವುದಿಲ್ಲ.